**DW-3:** ವೈ. ಆಂಜನೇಯಲು

ದಿನಾಂಕಃ **25.03.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ವಾದಿಗಳ ಪರವಾಗಿ ಶ್ರೀ ವಿ.ಎಸ್. ವಕೀಲರಿಂದಃ**

1. ದಿನಾಂಕಃ 08.01.1945 ರ ದಾನಪತ್ರವನ್ನು ನಾನು ಓ.ಎಸ್. 40/2019 ರಲ್ಲಿ ಹಾಜರುಪಡಿಸಿಲ್ಲ ಎಂಬುದು ಸರಿಯಲ್ಲ. ಸದರಿ ದಾನಪತ್ರದ ಆಸ್ತಿಗಳು ಮೂಲತಃ ನಮ್ಮ ಅಜ್ಜಿ ಲಕ್ಷ್ಮಮ್ಮ ರವರಿಗೆ ಸೇರಿದ್ದು. ಲಕ್ಷ್ಮಮ್ಮ ರವರು ನನ್ನ ತಾತನ ಒಬ್ಬಳೇ ಮಗಳು ಎಂದರೆ ಸರಿ. ಲಕ್ಷ್ಮಮ್ಮ ರವರಿಗೆ 3 ಜನ ಮಕ್ಕಳು ಎಂದರೆ ಸರಿ. ಅವರೆಂದರೆ ವೇಲೂರು ವೆಂಕಟಯ್ಯ, ವೆಂಕಟರಾಮಯ್ಯ ಮತ್ತು ಶ್ರೀರಾಮಯ್ಯ. ಸದರಿ ದಾನಪತ್ರದ ಸ್ವತ್ತುಗಳನ್ನು ನಮ್ಮ ಅಜ್ಜಿ ಲಕ್ಷ್ಮಮ್ಮ ರವರ 3 ಜನ ಮಕ್ಕಳು ಓ.ಎಸ್. 12/2013 ರಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಸದರಿ ದಾವೆಯ ರಾಜೀ ಡಿಕ್ರಿಯಂತೆ ಎಫ್.ಡಿ.ಪಿ. ಯಂತೆ ಅವರವರ ಭಾಗಕ್ಕೆ ಸ್ವತ್ತುಗಳನ್ನು ಅವರವರೇ ಅನುಭವಿಸುತ್ತಿದ್ದಾರೆ ಎಂದರೆ ಸಾಕ್ಷಿಯು ಕೆಲವು ಆಗಿವೆ ಕೆಲವು ಆಗಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ರಾಜೀ ಡಿಕ್ರಿ ಮತ್ತು ಎಫ್.ಡಿ.ಪಿ. ಯಂತೆ ಸಮನಾಗಿ ವಿಭಾಗವಾಗಿ ನನ್ನ ತಂದೆಯ ಭಾಗಕ್ಕೆ ಬಂದ ಸ್ವತ್ತುಗಳಿಗೆ ಸಂಬಂಧಿಸಿದಂತೆ ಈ ದಾವೆ ಸಲ್ಲಿಸಲಾಗಿದೆ ಎಂದರೆ ಸರಿ.

2. ಓ.ಎಸ್. 40/2019 ರ ದಾವೆಯನ್ನು ನಾನು ಸಲ್ಲಿಸಿದ ನಂತರ ನನ್ನ ಸಹೋದರಿಯರು ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿಗಳು ಎಂದು ನನ್ನ ಸಹೋದರಿಯರು ದಾವೆ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ಆಸ್ತಿಗಳು ಎಂದು ಉತ್ತರಿಸುತ್ತಾರೆ. ನಾನು ಹಾಜರುಪಡಿಸಿರುವ ದಾನಪತ್ರ ನನಗೆ ಸಂಬಂಧಪಟ್ಟಿಲ್ಲದೇ ಇದ್ದರೂ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾನಪತ್ರಕ್ಕೂ ಈ ದಾವೆಗೂ ಸಂಬಂಧ ಇಲ್ಲದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.